# ರಿಪೇರಿ ರಾದ್ಧಾಂತ

★ ಕೇವೀಟಿ ಮೇಗೂರು



ಪ್ರತಿದಿನ ಟೀವಿ ಆನ್ ಮಾಡಿದಾಗ, 'ನಿಮ್ ಟೂತ್ ಪೇಸ್ಟ್‌ನಲ್ಲಿ ಉಪ್ಪಿದೆಯೇ?','ಏನಪ್ಪಾ ಲಡ್ಡು ಬಾಯಿಗೆ ಬಿತ್ತಾ?', 'ನೀವು ತುಂಬಾ ತೆಳ್ಳಗಿದ್ದೀರಾ?', 'ಉಸಿರಿನ ದುರ್ವಾಸನೆಯೇ?' ಅಂತೆಲ್ಲಾ ನೂರೆಂಟು ಪ್ರಶ್ನೆ ಮಾಡುತ್ತಿದ್ದ ನನ್ನ ಟೀವಿ ಗೆಳೆಯ–ಗೆಳತಿಯರು ಆ ದಿನ ಎಲ್ಲಿ ಹೋಗಿದ್ದರೋ ಏನೋ, ನಾನು ಆಫೀಸಿನಿಂದ ಬಂದು ಟೀವಿ ಆನ್ ಮಾಡಿದಾಗ, ಟೀವಿ ಮುನಿಸಿಕೊಂಡು ಮೌನ ಆಚರಿಸುತ್ತಿತ್ತು. ಬಹುಷಃ ರಿಮೋಟ್ ಕಂಟ್ರೋಲ್‌ನ ಬ್ಯಾಟರಿ ಸೆಲ್ ವೀಕಾಗಿರಬೇಕೆಂದು ಕೊಂಡು, ಬೆಳಿಗ್ಗೆ ಅಂಗಡಿಯಿಂದ ಸೆಲ್ ತಂದು ಟ್ರೈ ಮಾಡಿದರಾಯ್ತೆಂದು ಸುಮ್ಮನಾದೆ. ಮಾರನೇ ದಿನ ಸೆಲ್ ತಂದು ರಿಮೋಟ್ ಕಂಟ್ರೋಲರ್‌ಗೆ ತುಂಬಿಸಿ ಆನ್ ಮಾಡಿದೆ.

ಊಹುಂ.. ಉಸಿರಾಡಲಿಲ್ಲ.

ಇದು ಫಸ್ಟ್‌ಏಯ್ಡ್‌ಗೆ ಸರಿ ಹೋಗುವ ರೋಗವಲ್ಲ. ಇದಕ್ಕೆಲ್ಲಾ ಇದರ ಸಣ್ಣ ಕರುಳು, ದೊಡ್ಡಕರುಳು, ಯಕೃತ್ತು ಎಲ್ಲಾ ಬಿಚ್ಚಿ ಹರಡಿ ಚೆಕ್ ಮಾಡುವ ರಿಪೇರಿ ರಾಘಣ್ಣನೇ ಸರಿ ಎಂಬುದು ಮನದಟ್ಟಾಯಿತು. ಮತ್ತೊಂದು ದಿನವೂ ಟೀವಿಯಿಲ್ಲದೇ ಇರುವುದು ಸಾಧ್ಯವೇ? ತಡಮಾಡದೆ, ಮೂರು ವರ್ಷದ ಕೂಸಿನ ತೂಕವಿದ್ದ ಟೀವಿಯನ್ನು ಬ್ಯಾಗಿನಲ್ಲಿ ತುಂಬಿಕೊಂಡು, ಎರಡು ಕಿಲೋಮೀಟರ್ ದೂರದಲ್ಲಿದ್ದ ರಿಪೇರಿ ಶಾಪ್‌ಗೆ ಕೊಟ್ಟು ಬಂದೆ. ಮತ್ತೆರಡು ದಿನಗಳ ನಂತರ ಟೀವಿಯನ್ನು ಹಿಂತಿರುಗಿ ತರಲು ಹೋದಾಗ, ರಾಘಣ್ಣ ಹೇಳಿದ: 'ನಿಮ್ಮ ಟೀವಿ ಒಳ್ಳೆ ಕಂಡೀಷನ್‌ನಲ್ಲೇ ಇದೆ. ಏನೂ ಪ್ರಾಬ್ಲಂ ಇಲ್ಲ. ನಿಮ್ಮ ಕೇಬಲ್ಲಿಂದೇನಾದ್ರೂ ಪ್ರಾಬ್ಲಂ ಇರ್‍ಬೋದು. ಯಾವುದಕ್ಕೂ ಒಂದ್ಸಲ ಕೇಬಲ್ ಆಪ್‌ರೇಟರನ್ನು ಕೇಳಿ ನೋಡಿ.'

ಮನೆಗೆ ಬಂದವಳೇ, ಕೇಬಲ್ ಕಿಟ್ಟಿಗೆ ಫೋನಾಯಿಸಿದೆ. ಟೀವಿಯ ಕ್ಷೇಮಸಮಾಚಾರ ತಿಳಿಸಿದೆ. ಕೇಬಲ್ ಕನೆಕ್ಷನ್ ಚೆಕ್ ಮಾಡುವಂತೆ ಕೇಳಿದೆ.

'ಮೇಡಂ, ನೀವು ಸಬ್‌ಸ್ಕ್ರಿಪ್ಷನ್ ಕಟ್ಟೀದಿರಾ? ಈಗ ನಿಮ್ಮನೇಲಿ ಕರೆಂಟ್ ಇದೆಯಾ? ನಿಮ್ಮ ಸೆಟ್‌ಟಾಪ್ ಬಾಕ್ಸ್‌ನ ಹಿಂಬದಿಯಲ್ಲೊಂದು ನಂಬರ್ ಕಾಣ್ತಾ ಇದೆ ಅಲ್ವಾ? ಅದನ್ನ ಸ್ವಲ್ಪ ಓದಿ ಹೇಳ್ತೀರಾ?'– ಎಂಬಿತ್ಯಾದಿ ಹತ್ತು ಹಲವು ಪ್ರಶ್ನೆಗಳ ಕೇಳಿ ನನ್ನನ್ನು ಹಣ್ಣುಗಾಯಿ ನೀರುಗಾಯಿ ಮಾಡಿದ ನಂತರ ಕಿಟ್ಟಿ ಕೇಬಲ್ ಕನಕ್ಷನ್‌ಗೂ ಏನೂ ಪ್ರಾಬ್ಲಂ ಇಲ್ಲ ಎಂದು ತಿಳಿಸಿದ. ಮಾರನೇ ದಿನ ವೋಲ್ಟೇಜ್ ಸ್ಟೆಬಿಲೈಸರ್ ಏನಾಗಿದೇಂತ ಟೀವಿ ಖರೀದಿಸಿದ ಅಂಗಡಿಯಲ್ಲಿ ವಿಚಾರಿಸೋಣವೆಂದು ಅಂದುಕೊಳ್ಳುತ್ತಿರುವಾಗ, ನೆರೆಮನೆಯ ಏಳು ವರ್ಷದ 'ಮುನ್ನಾ' ಮನೆಯೊಳಗೆ ಬಂದ. ಮಾಮೂಲಿನಂತೆ ಮೂಲೆಯಲ್ಲಿದ್ದ ಟ್ರೆಡ್‌ಮಿಲ್‌ನಲ್ಲಿ ಆಟವಾಡುತ್ತಿದ್ದ, ಟೀವಿ ಕೆಟ್ಟಿತ್ತಾದ್ದರಿಂದ ನಾನೂ ಮನೆ ಕೆಲಸದಲ್ಲಿ ತೊಡಗಿಕೊಂಡೆ.

ಹಾಲಿನಲ್ಲಿ ಓಡಾಡಿಕೊಂಡು ಆಟವಾಡುತ್ತಿದ್ದ ಮುನ್ನಾ ಅದೇನು ಚೇಷ್ಟೆ ಮಾಡಿದನೋ ಏನೋ, ಆಶ್ಚರ್ಯ! ಸೈಲೆಂಟಾಗಿದ್ದ ಟೀವಿ ಜೀವ ತುಂಬಿಕೊಂಡು ಅರಚಾಡತೊಡಗಿತು!

ರಿಮೋಟ್ ಕಂಟ್ರೋಲ್‌ನಿಂದ ಟೀವಿ ವಾಲ್ಯೂಂ ಮ್ಯೂಟ್ ಮಾಡಿ, 'ಟೀವಿ ಆನ್ ಆಗುವಂತೆ ನೀನೇನು ಮಾಡಿದೆ' ಎಂದು ಮುನ್ನನನ್ನು ಕೇಳಿದೆ!

'ಅಲ್ಲೇ ನೆಲದ ಮೇಲೆ ಬಿದ್ದಿತಲ್ಲಾ ಆಂಟೀ, ಆ ಟೀವಿ ವೈರು, ಅದರ ಪಿನ್ನನ್ನ ಸಾಕೇಟಿಗೆ ಇನ್ಸರ್ಟ್ ಮಾಡಿದೆ. ಯಾಕೆ ಟೀವಿ ಹಾಳಾಯ್ತಾ?'– ಗಾಬರಿಗೊಂಡು ಮಗು, ಕಣ್ಣರಳಿಸಿ ಕೇಳಿದಾಗ, ಇಂಗು ತಿಂದ ಮಂಗನಾದೆ!

ಆವತ್ತು ಬೆಳಿಗ್ಗೆ ಆಫೀಸಿಗೆ ಹೊರಡುವ ವೇಳೆಯಲ್ಲಿ, ಡಿಸ್‌ಕನೆಕ್ಟ್ ಮಾಡಿದ್ದ ಟೀವಿ ವೈರನ್ನು ಕನೆಕ್ಟ್ ಮಾಡುವುದೊಂದನ್ನು ಮರೆತು, ಬೇರೆಲ್ಲಾ ವಿಷಯದಲ್ಲಿ ತಲೆ ಓಡಿಸಿದ್ದೆ. ಎರಡೂ ಕೈಗೆ ಎರಡೆರಡು ಚಾಕೋಲೆಟ್ ಕೊಟ್ಟು ಮುನ್ನನನ್ನು ಮನೆಗೆ ಕಳಿಸಿದೆ. ■